ಇಂಗ್ಲಿಷ್ ಮೂಲ: ಜಾರ್ಜ್ ಪ್ಲಿಂಪ್ಟನ್
ಕನ್ನಡಕ್ಕೆ: ಹೇಮಾ ಎಸ್.
ಕಲೆ: ಗುರು ನಾವಳ್ಳಿ

# ಅಂತರಾಳದ ದನಿಗೆ ಭಾಷೆಯ ದೀವಿಗೆ

ಮಾಯಾ ಏಂಜೆಲೊ ಅಮೆರಿಕನ್ ಕವಯಿತ್ರಿ, ಬರಹಗಾರ್ತಿ, ನಿರ್ದೇಶಕಿ, ನಟಿ, ನಾಗರಿಕ ಹಕ್ಕುಗಳ ಹೋರಾಟಗಾರ್ತಿ, ಹೀಗೆ ಈಕೆ ಬದುಕಿನಲ್ಲಿ ನಿರ್ವಹಿಸಿದ ಪಾತ್ರಗಳು ಅನೇಕ. ಈಕೆ (1928 ಏಪ್ರಿಲ್ 04 – 28 ಮೇ 2014) ಅಮೆರಿಕ ಸಂಯುಕ್ತ ಸಂಸ್ಥಾನದ ಮಿಸ್ಸೌರಿಯಲ್ಲಿ ಜನಿಸಿದರು. ಕಪ್ಪು ನಾಡಿನ ಈ ಹಕ್ಕಿ ಹಾಡಿದ್ದು ಅಡೆತಡೆಗಳ ನಡುವೆಯೂ ಬದುಕು ಕಟ್ಟಿಕೊಳ್ಳುವ ಮನುಷ್ಯನೊಳಗಿನ ಆದಿಮ ಛಲದ ಕುರಿತು. ಈಕೆ ಬದುಕಿನಲ್ಲಿ ಹಲವು ಸೋಲು, ನೋವು, ಅಪಮಾನಗಳನ್ನು ಎದುರಿಸಿ ಬದುಕನ್ನು ಕಟ್ಟಿಕೊಂಡ ಛಲಗಾತಿ. ಕಾವ್ಯ, ನಾಟಕ, ಆತ್ಮಚರಿತ್ರೆ, ಪ್ರಬಂಧ, ಹೀಗೆ ಈಕೆಯ ಬರವಣಿಗೆಯ ವ್ಯಾಪ್ತಿ ದೊಡ್ಡದು. ಈಕೆಯ ಕೆಲವು ಕೃತಿಗಳು ಹೀಗಿವೆ: **‘Just Give Me a Cool Drink of Water 'fore I Diiie’** (1971), **‘Oh Pray My Wings Are Gonna Fit Me Well’** (1975), **‘And Still I Rise’** (1978), **‘Shaker, Why Don't You Sing?’** (1983), **‘Poems’** (1986). **‘Now Sheba Sings the Song’** (1987), **‘I Shall Not Be Moved’** (1990), **‘On the Pulse of Morning’** (1993) ಇವು ಈಕೆಯ ಕೆಲವು ಕವನ ಸಂಕಲನಗಳು. ಈಕೆಯ ಆತ್ಮಚರಿತ್ರೆಗಳು ಏಳು ಸಂಪುಟಗಳಲ್ಲಿ ಪ್ರಕಟವಾಗಿವೆ: **‘I Know Why the Caged Bird Sings ‘On the Pulse of Morning’** (1969), **‘Gather Together in My Name’** (1974), **‘Singin' and Swingin' and Gettin' Merry Like Christmas’** (1976), **‘The Heart of a Woman’** (1981), **All God's Children Need Traveling Shoes’** (1986), **‘A Song Flung Up to Heaven’** (2002), **‘Mom & Me & Mom’** (2013). ಈಕೆಯ **‘I Know Why the Caged Bird Sings’** ಎನ್ನುವ ಆತ್ಮಕತೆಯನ್ನು ಎಂ.ಆರ್. ಕಮಲ ಅವರು ‘ಸೆರೆಹಕ್ಕಿ ಹಾಡುವುದು ಏಕೆಂದು ಬಲ್ಲೆ’ ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರ ಪದ್ಯಗಳು ಕೂಡ ಕನ್ನಡಕ್ಕೆ ಅನುವಾದಗೊಂಡಿವೆ. ಈಕೆಯ **‘Just Give Me a Cool Drink of Water’** ಪುಲಿಟ್ಜರ್ ಪ್ರಶಸ್ತಿಗೆ